# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | **584** |
| **ಮಾನ್ಯ ಸದಸ್ಯರ ಹೆಸರು** | ಶ್ರೀ ಬಿ.ಜಿ. ಪಾಟೀಲ<br>(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು |
| **ಉತ್ತರಿಸುವ ದಿನಾಂಕ** | **22.07.2024** |
| **ಉತ್ತರಿಸುವ ಸಚಿವರು** | **ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು** |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಆರೋಗ್ಯ ಇಲಾಖೆಗೆ ಸಹಕಾರಿಯಾಗುವಂತೆ ಕಾರ್ಯ ನಿರ್ವಹಿಸುತ್ತಿರುವ ಆಂಬುಲೆನ್ಸ್ ಗಳ ಸಂಖ್ಯೆ ಎಷ್ಟು; | ಆರೋಗ್ಯ ಇಲಾಖೆಯ ಸೇವೆಯಡಿ ಸಲ್ಲಿಸುತ್ತಿರುವ ವಿವಿಧ ಆಂಬ್ಯುಲೆನ್ಸ್‌ಗಳ ವಿವರಗಳು ಈ ಕೆಳಗಿನಂತಿವೆ:<br>• **108** ಆರೋಗ್ಯ ಕವಚ ಸೇವೆಯನ್ನು ಸರ್ಕಾರ ಮತ್ತು ಖಾಸಗಿ ಸಹಭಾಗಿತ್ವದಡಿಯಲ್ಲಿ ಇ.ಎಂ.ಆರ್.ಐ ಗ್ರೀನ್ ಹೆಲ್ತ್ ಸಂಸ್ಥೆಯ ಮೂಲಕ ಸೇವೆ ಒದಗಿಸಲಾಗುತ್ತಿದ್ದು, ಸದರಿ **108**-ಆರೋಗ್ಯ ಕವಚ ಆಂಬ್ಯುಲೆನ್ಸ್‌ಗಳನ್ನು ತುರ್ತು ಸಂದರ್ಭದಲ್ಲಿ ಘಟನಾ ಸ್ಥಳದಿಂದ ಹತ್ತಿರದ ಆಸ್ಪತ್ರೆಗೆ ರವಾನಿಸಲು ಉಪಯೋಗಿಸಲಾಗುವುದು ಹಾಗೂ ಸದರಿ ಅಂಬ್ಯುಲೆನ್ಸ್‌ಗಳ ನಿರ್ವಹಣೆಯನ್ನು ಇ.ಎಂ.ಆರ್.ಐ ಗ್ರೀನ್ ಹೆಲ್ತ್ ಸಂಸ್ಥೆಯ ಮೂಲಕ ಉಚಿತ ಸೇವೆಯನ್ನು ಒದಗಿಸಲಾಗುತ್ತಿದೆ.<br>• ರಾಜ್ಯ ಅಂಬ್ಯುಲೆನ್ಸ್‌ಗಳು ಆರೋಗ್ಯ ಸಂಸ್ಥೆಗಳಲ್ಲಿ ನಿಲುಗಡೆ ಮಾಡಿ ಆಸ್ಪತ್ರೆಯಿಂದ ಮೇಲ್ದರ್ಜೆ ಆಸ್ಪತ್ರೆಗೆ ರವಾನಿಸಲಾಗುವುದು ಹಾಗೂ ಸದರಿ ಅಂಬ್ಯುಲೆನ್ಸ್‌ಗಳ ನಿರ್ವಹಣೆಯನ್ನು ಸಂಬಂಧಪಟ್ಟ ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿಗಳ ವತಿಯಿಂದ ನಿರ್ವಹಣೆ ಮಾಡಲಾಗುವುದು. ಪರಿಶಿಷ್ಟಜಾತಿ, ಪರಿಶಿಷ್ಟ ಪಂಗಡದ ಹಾಗೂ ಬಿ.ಪಿ.ಎಲ್ ಫಲಾನುಭವಿಗಳಿಗೆ ಉಚಿತ ಸೇವೆಯನ್ನು ಹಾಗೂ ಎ.ಪಿ.ಎಲ್ ಫಲಾನುಭವಿಗಳು ಕನಿಷ್ಟ ದರಗಳನ್ನು ಪಾವತಿಸಬೇಕಾಗಿರುತ್ತದೆ.<br>• ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ **108** ಆರೋಗ್ಯ ಕವಚ ಸೇವೆಯಡಿಯಲ್ಲಿ ಸೇವೆ ಸಲ್ಲಿಸುತ್ತಿರುವ ಆಂಬುಲೆನ್ಸ್**ಗಳ** ವಿವರಗಳು ಈ ಕೆಳಕಂಡತಿವೆ. |

| ಕ್ರ. ಸಂ | ವಿವರ | ಜಿಲ್ಲೆ | ಒಟ್ಟು ಆಂಬುಲೆನ್ಸ್ ಗಳ ಸಂಖ್ಯೆ | ಚಾಲ್ತಿ | ದುರಸ್ತಿ | ನಿರ್ವಹಣೆ | ನೀಡಲಾಗುವ ಸೇವೆಯವಿವರಗಳು |
|---|---|---|---|---|---|---|---|
| 1) | ರಾಜ್ಯ ವಲಯ ಆಂಬ್ಯುಲೆನ್ಸ್ ಸೇವೆಗಳು. | ಕಲಬುರಗಿ | 37 | 35 | 2 | ಆರೋಗ್ಯ ಸಂಸ್ಥೆಗಳಲ್ಲಿ ನಿಲುಗಡೆ, ಬಳಕೆ ಹಾಗೂನಿರ್ವಹಣೆ | ಆಸ್ಪತ್ರೆಯಿಂದ ಮೇಲ್ದರ್ಜೆ ಸಂಸ್ಥೆಗೆ ರವಾನಿಸುವುದು. |

| | | | | | | | | |
|---|---|---|---|---|---|---|---|---|
| | | ಯಾದಗಿರಿ | 19 | 18 | 1 | | | |
| 2) | 108-ಆರೋಗ್ಯ ಕವಚ ಆಂಬ್ಯುಲೆನ್ಸ್ ಸೇವೆಗಳು. | ಕಲಬುರಗಿ | 26 | 24 | 2 | ಸರ್ಕಾರಿಮತ್ತು ಖಾಸಗಿ ಸಹಭಾಗಿತ್ವದಡಿಯಲ್ಲಿ ಜಿ.ವಿಕೆ-ಇ.ಎಂ.ಆರ್.ಐ ಸಂಸ್ಥೆಯ ಮೂಲಕ | ಮನೆಯಿಂದ/ ದುರ್ಘಟನಾ ಸ್ಥಳದಿಂದ ಆಸ್ಪತ್ರೆಗೆಹಾಗೂ ಕೆಲವುತುರ್ತು ಸಂದರ್ಭದಲ್ಲಿ ಆಸ್ಪತ್ರೆಯಿಂದ ಮೇಲ್ದರ್ಜೆ ಆಸ್ಪತ್ರೆಗೆ | |
| | | ಯಾದಗಿರಿ | 12 | 11 | 1 | | | |

| | | |
|---|---|---|
| ಆ | ಸದರಿ ಆಂಬುಲೆನ್ಸ್‌ಗಳು ಸುಸ್ಥಿತಿಯಲ್ಲಿ ಇಲ್ಲದಿರುವುದು ಹಾಗೂ ವೆಂಟಿಲೇಟರ್‌ಗಳು ಕಾರ್ಯ ನಿರ್ವಹಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸದರಿ ಆಂಬುಲೆನ್ಸ್‌ಗಳು ಸುಸ್ಥಿತಿಯಲ್ಲಿ ಇಲ್ಲದಿರುವುದು ಹಾಗೂ ವೆಂಟಿಲೇಟರ್‌ಗಳು ಕಾರ್ಯ ನಿರ್ವಹಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆ |
| ಇ | ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು) | ಕಲಬುರಗಿ ಜಿಲ್ಲೆಯ ಒಟ್ಟು 26 ಆರೋಗ್ಯ ಕವಚ-108 ಆಂಬುಲೆನ್ಸ್‌ಗಳ ಪೈಕಿ ಎರಡು ಬೇಸಿಕ್ ಲೈಫ್ ಸಪೋರ್ಟ್ ಆಂಬುಲೆನ್ಸ್‌ಗಳು ದುರಸ್ಥಿಗೆ ಒಳಗಾಗಿದೆ ಹಾಗೂ ಒಂದು ಅಡ್ವಾನ್ಸ್ ಲೈಫ್‌ಸಪೋರ್ಟ್ ಆಂಬುಲೆನ್ಸ್‌ನ ವೆಂಟಿಲೇಟರ್ ದುರಸ್ಥಿಗೆ ಒಳಗಾಗಿದೆ.<br><br>ಯಾದಗಿರಿ ಜಿಲ್ಲೆಯ ಒಟ್ಟು 12 ಆರೋಗ್ಯ ಕವಚ-108 ಆಂಬುಲೆನ್ಸ್‌ಗಳ ಪೈಕಿ ಎರಡು ಬೇಸಿಕ್ ಲೈಫ್ ಸಪೋರ್ಟ್ ಆಂಬುಲೆನ್ಸ್‌ಗಳು ದುರಸ್ಥಿಗೆ ಒಳಗಾಗಿದೆ ಹಾಗೂ ಒಂದು ಅಡ್ವಾನ್ಸ್ ಲೈಫ್ ಸಪೋರ್ಟ್ ಆಂಬುಲೆನ್ಸ್‌ನ ವೆಂಟಿಲೇಟರ್ ದುರಸ್ಥಿಗೆ ಒಳಗಾಗಿದೆ.<br><br>ಕಲಬುರಗಿ ಜಿಲ್ಲೆಯ ಒಟ್ಟು 36 ರಾಜ್ಯ ಆಂಬುಲೆನ್ಸ್‌ಗಳ ಪೈಕಿ ಎರಡು ಬೇಸಿಕ್ ಲೈಫ್ ಸಪೋರ್ಟ್ ಅಂಬ್ಯುಲೆನ್ಸ್‌ಗಳು ದುರಸ್ಥಿಗೆ ಒಳಗಾಗಿದೆ.<br><br>ಯಾದಗಿರಿ ಜಿಲ್ಲೆಯ ಒಟ್ಟು 19 ರಾಜ್ಯ ಅಂಬ್ಯುಲೆನ್ಸ್‌ಗಳ ಪೈಕಿ ಒಂದು ಅಡ್ವಾನ್ಸ್ ಲೈಫ್ ಸಪೋರ್ಟ್ ಆಂಬುಲೆನ್ಸ್ ದುರಸ್ಥಿಗೆ ಒಳಗಾಗಿದೆ. |

**ಆಕುಕ 67 ಎಸ್‌ಬಿವಿ 2024**

**(ದಿನೇಶ್ ಗುಂಡೂರಾವ್)**
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು**